



ಚಿತ್ರ: ಹೇಮವತಿ

ಅಂದ, ಆಕಾರ, ಬಣ್ಣ, ಸೌಂದರ್ಯದಲ್ಲಿ ದಾಸವಾಳಕ್ಕೆ ಅನುರೂಪವಾದ ಹೂವು ಇನ್ನೊಂದು ಸಿಗಲಾರದು. ಇದರ ಜೊತೆಗೆ ಈ ಹೂವು ಸೌಂದರ್ಯ ಹಾಗೂ ಆರೋಗ್ಯವರ್ಧಕ ಔಷಧೀಯ ಗುಣಗಳನ್ನೂ ಹೊಂದಿದೆ. ಅಲ್ಲದೆ ಅಡುಗೆಗೂ ದಾಸವಾಳ ಹೂವನ್ನು ಬಳಸುವುದು ಇದೆ. ಒಳಾಂಗಣ ಅಲಂಕಾರಕ್ಕೆ ಸೂಕ್ತವಾದ ಹೂವು ಇದು. ಹಬ್ಬ ಹರಿದಿನಗಳಲ್ಲದೆ ನಿತ್ಯವೂ ಪೂಜೆಗೆ ಬಳಕೆಯಾಗುತ್ತದೆ. ಹೀಗಾಗಿ ದಾಸವಾಳ ಬಹುರೂಪಿ, ಬಹುಗುಣ ಹೊಂದಿರುವ ವಿಶಿಷ್ಟ ಹೂವು.

ದಾಸವಾಳ ಹೂವಿನ ಫೇಷಿಯಲ್ ಸೌಂದರ್ಯವರ್ಧನೆಗೆ ಬಹಳ ಪ್ರಯೋಜನಕಾರಿ. ಇದರ ಗಿಡದ ಎಲೆ ಉತ್ತಮ ಕಂಡೀಷನರ್ ಆಗಿದ್ದು ತಲೆಗೂದಲ ಆರೈಕೆಗೆ ಉಪಕಾರಿ. ದಾಸವಾಳ ಹೂವಿನ ಸಾರು ರುಚಿಯೋ ರುಚಿ ಜೊತೆಗೆ ಆರೋಗ್ಯಕ್ಕೆ ಬಹಳ ಒಳ್ಳೆಯದು. ಇದರ ಎಲೆಗಳನ್ನು ದೋಸೆ ಹಿಟ್ಟಿಗೆ ಬೆರೆಸಿ ರುಚಿಯಾದ, ಪೌಷ್ಟಿಕವಾದ ದೋಸೆ ಮಾಡಬಹುದು.

ದಾಸವಾಳ ಹೂವಿನ ಬಣ್ಣದಲ್ಲೇ ಮಾದಕ ಗುಣವಿದೆ. ಕಡುಗೆಂಪು, ಗುಲಾಬಿ, ಹಳದಿ, ಬಿಳಿ, ತಿಳಿಗುಲಾಬಿ, ತಿಳಿಹಳದಿ, ನಸುಗೆಂಪು.. ಹೀಗೆ ಹಲವು ಬಣ್ಣ ವೈವಿಧ್ಯಗಳಲ್ಲೂ ಬೆಳೆಯುವ ದಾಸವಾಳ ಸುವಾಸನೆಯಿಲ್ಲದಿದ್ದರೂ ಅದರ ಚೆಲುವಿನಿಂದಲೇ ಮನಸೆಳೆಯುತ್ತದೆ. ಪೋಷಕಾಂಶಗಳ ಆಗರವಾಗಿರುವ ದಾಸವಾಳ ಕೇಶವನ್ನು ಕಪ್ಪಾಗಿಸಿ ಆರೋಗ್ಯಪೂರ್ಣವಾಗಿಸುತ್ತದೆ. ಮೊಡವೆ ನಿವಾರಿಸುತ್ತದೆ, ತ್ವಚೆಯನ್ನು ಮೃದುವಾಗಿಸಿ ಬಂಗು ನಿವಾರಣೆಗೂ ಸಹಕರಿಸುತ್ತದೆ. ಇದರಲ್ಲಿರುವ ಆ್ಯಂಟಿ ಆಕ್ಸಿಡೆಂಟ್ ಚರ್ಮ ಸುಕ್ಕುಗಟ್ಟುವುದನ್ನು ತಡೆಯುತ್ತದೆ.

ಹೂವಿನ ಪೇಸ್ಟ್ ಮುಖಕ್ಕೆ ಹಚ್ಚುವುದರಿಂದ ಮುಖದಲ್ಲಿರುವ ಕಪ್ಪುಕಲೆ ಮಾಯವಾಗುತ್ತದೆ, ಹೆಚ್ಚು ಹೊಳಪು ಬರುವಂತೆ ಮಾಡುತ್ತದೆ.

## ತ್ವಚೆಯ ಅಂದಕ್ಕೆ...

ದಾಸವಾಳ ಹೂವನ್ನು ಕಿವುಚಿ ಪೇಸ್ಟ್ ತರ ಮಾಡಿ ಮುಖಕ್ಕೆ ಹಚ್ಚುವುದರಿಂದ ಮುಖದ ತ್ವಚೆ ನುಣುಪು ಹಾಗೂ ಹೊಳಪಿನಿಂದ ಕೂಡಿರಲು ಸಾಧ್ಯವಾಗುತ್ತದೆ. ಅಲ್ಲದೆ ಈ ಹೂವಿನಲ್ಲಿ ತೇವಾಂಶ ಹೆಚ್ಚು ಸಂಗ್ರಹವಾಗಿರುವುದರಿಂದ ದಾಸವಾಳ ಮಾಯಿಶ್ಚರೈಸರ್‌ನಂತೆ ಕೆಲಸ ಮಾಡುತ್ತದೆ.

ಸೌಂದರ್ಯವರ್ಧಕ ಕ್ರೀಮ್‌ಗಳಲ್ಲಿ ದಾಸವಾಳದ ಎಸೆನ್ಸ್ ಬಳಸುತ್ತಾರೆ. ದಾಸವಾಳ ಹೂವನ್ನು ಒಣಗಿಸಿ ಅದನ್ನು ಸುಟ್ಟು ಭಸ್ಮತಯಾರಿಸಿಕೊಂಡು ಹುಬ್ಬು, ರೆಪ್ಪೆಗಳಿಗೆ ನೀರಿನಲ್ಲಿ ಕಲಸಿ ಹಚ್ಚಿಕೊಂಡರೆ ಕಣ್ಣುಗಳಿಗೆ ಹೊಸ ಲುಕ್ ಬರುತ್ತದೆ.

## ಕೇಶ ಕಾಳಜಿ

ದಾಸವಾಳ ಹೂವಿಗೆ ಇನ್ನೊಂದು ಹೆಸರೇ ನೈಸರ್ಗಿಕ ಶಾಂಪು. ದಾಸವಾಳ ಹೂವು ಅಥವಾ ಎಲೆಯನ್ನು ನೀರಿನಲ್ಲಿ ಹಾಕಿ ಕಿವುಚಿ ಅರ್ಧ ಗಂಟೆ ಇಡಿ. ನಂತರ ಅದನ್ನು ಸೋಸಿ ಅದಕ್ಕೆ ಸ್ವಲ್ಪ ಆಲಿವ್ ಆಯಿಲ್ ಸೇರಿಸಿ ತಲೆಗೆ ಹಚ್ಚಿ. ಹತ್ತು ನಿಮಿಷದ ನಂತರ ತೊಳೆಯಿರಿ. ಇದರಿಂದ ತಲೆಗೂದಲು ರೇಷ್ಮೆಯ ನಯ ಹಾಗೂ ಹೊಳಪಿನಿಂದ ಕೂಡಿರುತ್ತದೆ. ಹೂವಿನ ಎಣ್ಣೆಯ ಉಪಯೋಗದಿಂದ ಕೂದಲು ಚೆನ್ನಾಗಿ ಬೆಳೆಯುತ್ತದೆ. ತಲೆ ಹೊಟ್ಟನ್ನು ನಿಯಂತ್ರಿಸುವುದಲ್ಲದೆ ಕೂದಲಿಗೆ ಹೊಳಪನ್ನು ನೀಡುತ್ತದೆ.

ದಾಸವಾಳ ಹೂವಿನ ಎಸಳುಗಳ ಜೊತೆಗೆ ಮೊಸರು ಸೇರಿಸಿ ಫೇಸ್‌ಮಾಸ್ಕ್ ಮಾಡಿಕೊಳ್ಳಬಹುದು. ಇದಕ್ಕೆ ದಾಸವಾಳ ಗಿಡದ ಎಲೆಗಳನ್ನೂ ಬಳಸಬಹುದು, ಈ ಪೇಸ್ಟ್ ಅನ್ನು ಮುಖಕ್ಕೂ, ತಲೆಗೂದಲಿಗೂ ಹಚ್ಚಬಹುದು.

### ಹೂವೊಂದು ನಾಮ ಹಲವು

ದಾಸವಾಳ, ದಾಸಪುಷ್ಪ ಎಂದೆಲ್ಲ ಕರೆಯುವ ದಾಸವಾಳದ ವೈಜ್ಞಾನಿಕ ಹೆಸರು Hibiscus rosa. ಸಂಸ್ಕೃತದಲ್ಲಿ ರುದ್ರ ಪುಷ್ಪ, ಜಪಾ ಪುಷ್ಪ, ಮಲಯಾಳದಲ್ಲಿ ಚಂಬರತ್ತಿ ಎಂದು ಇದರ ಹೆಸರು. ಇದರ ಮೂಲ ಚೀನಾ. ವರ್ಷವಿಡೀ ಹೂವು ಬಿಡುತ್ತದೆ. ಹೆಚ್ಚಿನ ಆರೈಕೆಯಿಲ್ಲದೆ ಬೆಳೆಯುತ್ತದೆ. ಗಣಪನ ಪೂಜೆಗೆ ದಾಸವಾಳ ವಿಶೇಷ. ಅಂದ ಹಾಗೆ ಮಲೇಷ್ಯಾದ ರಾಷ್ಟ್ರೀಯ ಹೂ ದಾಸವಾಳ.

ಎರಡೂ ಆರೋಗ್ಯಪೂರ್ಣವಾಗಿ ಸದೃಢವಾಗಲು ಇದು ಸಹಕಾರಿ.

ತಲೆಹೊಟ್ಟು ನಿವಾರಣೆಗೆ ದಾಸವಾಳ ಮತ್ತು ಮೆಹೆಂದಿ ಹಚ್ಚಿಕೊಂಡರೆ ಒಳ್ಳೆಯದು.

ದಾಸವಾಳ ಮತ್ತು ನೆಲ್ಲಿಕಾಯಿ ಮಾಸ್ಕ್ ಕೂದಲಿನ ಆರೋಗ್ಯಕ್ಕೆ ಬಹಳ ಒಳ್ಳೆಯದು. ನೆಲ್ಲಿಕಾಯಿ ಪುಡಿ ಹಾಗೂ ದಾಸವಾಳ ಹೂವಿನ ಪುಡಿ ಬೆರೆಸಿ ಮಿಕ್ಸ್ ಮಾಡಿ ತಲೆಗೆ ಹಚ್ಚಿ ಒಂದು ಗಂಟೆ ಕಾಲ ಹಾಗೇ ಬಿಟ್ಟು ನಂತರ ತಲೆಸ್ನಾನ ಮಾಡಿಕೊಂಡರೆ ಕೂದಲು ಸೊಂಪಾಗಿ ಬೆಳೆಯುವುದಲ್ಲದೆ ಕೆಂಚು ಕೂದಲು, ಕವಲು ಕೂದಲು ಆಗುವುದನ್ನು ತಡೆಯುತ್ತದೆ.

## ಔಷಧೀಯ ಗುಣ

ಬಿಳಿ ದಾಸವಾಳ ಎಲ್ಲಕ್ಕಿಂತ ಹೆಚ್ಚಿನ ಔಷಧಿ ಗುಣಗಳನ್ನು ಹೊಂದಿವೆ ಎನ್ನುವುದು ಆಯುರ್ವೇದ ತಜ್ಞರ ಅಭಿಮತ. ಬಿಳಿ ದಾಸವಾಳದ ಹೂವನ್ನು ಒಣಗಿಸಿ ಅದನ್ನು ಪುಡಿ ಮಾಡಿ ಸೇವನೆ ಮಾಡಿದರೆ ಎಲ್ಲಾ ರೀತಿಯ ಕ್ಯಾನ್ಸರ್ ಕಾಯಿಲೆಗಳು ನಿಯಂತ್ರಣಕ್ಕೆ ಬರುತ್ತದೆ.

ದಾಸವಾಳದ ಹೂಗಳಲ್ಲಿ ತೇವಾಂಶ, ನೈಟ್ರೋಜನ್, ಕೊಬ್ಬು, ಕಾಲ್ಸಿಯಂ, ರಂಜಕ, ಕಬ್ಬಿಣಾಂಶ ಇರುವುದರಿಂದ ಇದನ್ನು ಸೇವಿಸಿದರೆ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ದಾಸವಾಳದ ಮೊಗ್ಗನ್ನು ತಿನ್ನುವುದರಿಂದ ಬಾಯಿ ಹುಣ್ಣು ಗುಣವಾಗುತ್ತದೆ. ಹೂವಿನ ಕಷಾಯ ತಲೆನೋವು ಶಮನಕಾರಿ.